
ಕವಿತೆ

# ಕಣ್ಣು ಕುಕ್ಕುವ ನಟನಾಂಗಿ




ನಿದ್ದೆಗಣ್ಣಿನ ಲೋಲಾಕಿನಲಿ
ತೂರಾಡುವ ಈ ದೇಹ
ಭಾವ ಉಕ್ಕುಕ್ಕಿ ಹಿಡಿದಿಡುತ್ತದೆ
ನೀ ಬರಿ ಬರಿ ಎಂದು.

ಕಣ್ಣು ನೆತ್ತರಿನ ರಂಗು
ತಲೆ ತುಂಬ ಕವನದ ಗುಂಗು
ಇನ್ನೇನು ಬಿಚ್ಚಿಡುವ ಮನ
ಸದಾ ಟಿಂಗು ಟಾಂಗು.

ಸ್ವೈ ಏನ ಬರೆದೇನು
ಮೆಳ್ಳೆಗಣ್ಣ ಮಾಟಗಾತಿ ಕಿರಿದಾಗಿ
ಅಕ್ಷರ ಮಂಕಾಗಿ
ಪಟ ಪಟ ರೆಪ್ಪೆ ಆಡುವುದು!

ಬೆನ್ನ ಕತ್ತರಿ ಬಾಗಿ
ಹಸೆ ಸೇರ ಬಯಸಿದರೆ
ಇನ್ನಿಲ್ಲದ ಧಾವಂತ
ಲಟಪಟ ಉದುರುವ ಶಬ್ದಕ್ಕೆ.

ಚೆಲುವೆ ಬಲು ಮಾಟಗಾತಿ
ಕಪಿಮುಷ್ಟಿ ಹಿಡಿತ
ಕೆಕ್ಕರಿಸಿ ನೋಡಿದರೂ
ನುಣುಚಿಕೊಳ್ಳುವ ಸಂಗಾತಿ.

ಕೈಗೆ ಸಿಗದ ಕಾಜಾಣ
ಮನಸೆಲ್ಲ ದಿಗ್ಬಂಧನ
ಒರಟೊರಟು ನೀನೆನಿಸಿದರೂ
ನೀನಿಲ್ಲದೇ ನಾನಿರಲಾರೆ.

ಅದೇನು ಸಾಂಗತ್ಯವೊ
ಜನ್ಮಾಂತರದ ಋಣವೊ
ಸಿಲುಕಿದೆ ನಾ ಮೀನ ಬಲೆಯಲ್ಲಿ
ಜಾರಿಕೊಳುವುದೆಂತು?

ಕಿಚಾಯಿಸಿ ಬಿಡು
ಬೇಡ ಅಂದವರಾರು
ಅಕ್ಕಸಾಲಿಗನ ತಿದಿಯೊಳಗೆ
ಕಕ್ಕಿದಂತಾಗಿರುವೆ.

ಆರಣತಿ ಇಟ್ಟರೂ
ಜುಟ್ಟು ನಿನ ಕೈಲಿ
ನಾ ಕೊಟ್ಟಾಗಿದೆಯಲ್ಲ
ಆಡಿಸಾಡಿಸು ನಿನ್ನಿಷ್ಟದಂತೆ.

ನನಗೋ ಡಬಡಬ ಹೊಡೆತ
ಹೃದಯ ಮೀಟುವ ಶಬ್ದ
ಕಿವಿ ನಿಮಿರಿ ನಟನಾಂಗಿ
ಜನ ನಿನ್ನ ಒಪ್ಪುವ ತನಕ.

ಜತನವಾಗಿರು ಓ ನನ್ನ ಬಾಲೆ
ಜನಮನದ ಶಿರದಲ್ಲಿ
ನೀ ಕಣ್ಣು ಕುಕ್ಕುವ
ದೇವ ಕಳಶದಂತೆ!

● ಗೀತಾ ಜಿ. ಹೆಗಡೆ, ಕಲ್ಮನೆ